**ದಿನಾಂಕಃ 27.06.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್ ಎಸ್ ವಕೀಲರಿಂದಃ-**

ತರೀಕೆರೆ ನ್ಯಾಯಾಲಯದಲ್ಲಿ ಎಂ ಸಿ 21ಃ2023 ರಂತೆ ಸಲ್ಲಿಸಿರುವ ಅರ್ಜಿಯನ್ನು ಈ ಪ್ರಕರಣ ಚಾಲ್ತಿಯಲ್ಲಿರುವ ಸಮಯದಲ್ಲಿ ಅಂದರೆ ದಿಃ 06.04.2023 ರಂದು ಹೂಡಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಈ ಪ್ರಕರಣದ ಎದುರುದಾರರನ್ನು ನನ್ನ ಜೊತೆ ಬಂದು ಸಂಸಾರ ಮಾಡಲು ನಿರ್ದೇಶಿಸಬೇಕೆಂದು ಹಾಕಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿ ಸಲ್ಲಿಸಿದ ನಂತರ ನಾನು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಸದರಿ ಅರ್ಜಿ ವಿಚಾರಣೆಯಾಗದೇ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಅರ್ಜಿ ವಜಾ ಆದ ನಂತರ ತರೀಕೆರೆ ನ್ಯಾಯಾಲಯದಲ್ಲಿ ಇನ್ನೊಂದು ಬಾರಿ ಎಂ ಸಿ 21ಃ2023 ರಲ್ಲಿ ಕೋರಿರುವ ಪರಿಹಾರವನ್ನೇ ಕೋರಿ ಇನ್ನೊಂದು ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯು ವಿಚಾರಣಾ ಹಂತದಲ್ಲಿರುತ್ತದೆ. ಸದರಿ ಅರ್ಜಿಯ ಧೃಡೀಕೃತ ನಕಲನ್ನು ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ನಾನು ಹಾಜರುಪಡಿಸಿರುವ ನಿಆರ್-10 ರಿಂದ 41 ರ ದಾಖಲೆಗಳು ಈ ಪ್ರಕರಣದ ಸಲುವಾಗಿ ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ನಿಆರ್-2 ರಿಂದ 6 ರಲ್ಲಿರುವ ಆಸ್ತಿಗಳು ಅರ್ಜಿದಾರರ ತವರು ಮನೆಗಳ ಆಸ್ತಿಯೇ ಹೊರತು ನಾನು ಕೊಟ್ಟ ಆಸ್ತಿಗಳಲ್ಲ ಎಂದರೆ ಸರಿ. ನನ್ನ ಮಕ್ಕಳು ತರೀಕೆರೆ ನ್ಯಾಯಾಲಯದಲ್ಲಿ ನನ್ನ ವಿರುದ್ಧ ವಿಭಾಗ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ವಿಚಾರಣಾ ಹಂತದಲ್ಲಿರುತ್ತದೆ ಎಂದರೆ ಸರಿ.

ನಾನು ಅರ್ಜಿದಾರರಿಗೆ ಮತ್ತು ಮಕ್ಕಳಿಗೆ ಜೀವನಾಂಶಕ್ಕಾಗಿ ಹಣ ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಸುಮಾರು 22 ವರ್ಷಗಳ ಹಿಂದೆ ನನ್ನ ಮನೆಯಿಂದ ವಡವೆ ಬಂಗಾರವನ್ನು ತೆಗೆದುಕೊಂಡು ಹೋಗಿರುತ್ತಾರೆ. ಅರ್ಜಿದಾರರು ನನ್ನ ಮನೆಯಿಂದ ಚಿನ್ನದ ವಡವೆಗಳನ್ನು ತೆಗೆದುಕೊಂಡು ಹೋದ ಬಗ್ಗೆ ನಾನು ಯಾವುದೇ ದೂರು ನೀಡಿರುವುದಿಲ್ಲ. ಈ ಅರ್ಜಿಯನ್ನು ಅರ್ಜಿದಾರರು ಜೀವನಾಂಶ ನೀಡುವಂತೆ ಕೋರಿ ಹೂಡಿರುತ್ತಾರೆ ಎಂದರೆ ಸರಿ. ನನ್ನ ಮನೆಯಿಂದ ಅರ್ಜಿದಾರರು ವಡವೆಯನ್ನು ತೆಗೆದುಕೊಂಡು ಹೋದ ನಂತರ ಅರ್ಜಿದಾರರಿಗಾಗಲೀ ಅವರ ಮಕ್ಕಳಿಗಾಗಾಲೀ ವಿದ್ಯಾಭ್ಯಾಸ, ವೈದ್ಯಕೀಯ ಚಿಕಿತ್ಸೆ ಮತ್ತು ಜೀವನಾಂಶಕ್ಕೆ ಯಾವುದೇ ಹಣ ನೀಡಿರುವುದಿಲ್ಲ. ಅರ್ಜಿದಾರರ ಮೊದಲನೇ ಮಗಳ ಮದುವೆ ಆಗಿದ್ದು ಅವರ ಮದುವೆಗೆ ನಾನು ಹೋಗಿರುವುದಿಲ್ಲ ಮತ್ತು ಖರ್ಚು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರೇ ನನ್ನನ್ನು ಬಿಟ್ಟು ಹೋಗಿದ್ದಾರೆ ಎಂದು ನುಡಿಯುತ್ತಾರೆ. ಈ ಅರ್ಜಿಯನ್ನು ಸಲ್ಲಿಸಿದ ನಂತರ ಯಾವುದೇ ಜೀವನಾಂಶದ ವ್ಯವಸ್ಥೆ ಮಾಡಿರುವುದಿಲ್ಲ.

ರಂಗಪ್ಪ ಎಂದರೆ ನನ್ನ ತಂದೆ. ನಿಪಿ-2 ರ ಅಸಸ್ಮೆಂಟ್ ನನ್ನ ತಂದೆ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಗಿರಿಯಪ್ಪ ಎಂದರೆ ನನ್ನ ಅಜ್ಜ ಅಲ್ಲ. ನನ್ನ ಅಜ್ಜನ ಹೆಸರು ಕುರುಡು ರಂಗಣ್ಣ.



ಗಿರಿಯಪ್ಪ ಎಂಬ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನಿಗೆ ನನ್ನ ತಂದೆ ಎಷ್ಟನೇ ಮಗ ಎಂದು ನನಗೆ ಗೊತ್ತಿಲ್ಲ. ನಿಪಿ-3 ರಿಂದ 5 ರಲ್ಲಿರುವ ಆಸ್ತಿಗಳು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಗಳಲ್ಲ. ನಿಪಿ-3 ರಿಂದ 5 ರ ಆಸ್ತಿಗಳ ಮೇಲೆ ತರೀಕೆರೆ ನ್ಯಾಯಾಲಯದಲ್ಲಿ 2 ನೇ ಅರ್ಜಿದಾರಳು ಮತ್ತು ನನ್ನ ಇನ್ನೊಬ್ಬ ಮಗಳು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಗ್ಯವಾಗಿದ್ದರೂ ಸಹ ಅರ್ಜಿದಾರರಿಗೆ ಜೀವನಾಂಶ ಕೊಡುವುದನ್ನು ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಜೀವನಾಂಶ ನೀಡುವಷ್ಟು ಶಕ್ತಿ ನನಗೆ ಇದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಆದಾಯ ಇಲ್ಲಾ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರಿಗೆ ಯಾವುದೇ ಆದಾಯ ಇಲ್ಲಾ ಎಂದರೆ 1 ನೇ ಅರ್ಜಿದಾರರಿಗೆ ಆದಾಯ ಇದೆ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಜೀವನಾಂಶ ಕೊಡುವುದನ್ನು ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

C/c 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.